ಸಿಸಿ ನಂಃ 1779/2024

ಸಿ.ಡಬ್ಲೂ 1

ಪಿ.ಡಬ್ಲೂ 1

## 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

ಸಾಕ್ಷಿದಾರರ ಹೆಸರು ಃ ಮಹಾದೇವಿ
ತಂದೆಯ ಹೆಸರು ಃ ಕ್ಷಿರಾನಂದ
ವಯಸ್ಸು ಃ 53 ವರ್ಷ
ಉದ್ಯೋಗ ಃ ಗೃಹಿಣಿ
ವಾಸ ಸ್ಥಳ ಃ ಧಾರವಾಡ.

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **17-11-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಆರೋೀಪಿ ನನಗೆ ಗೊತ್ತು. ನನ್ನ ಯಜಮಾನರು ಈ ತೀರಿಕೊಂಡಿರುತ್ತಾರೆ ಸದರಿಯವರು ದಿನಾಂಕಃ 29-03-2024 ರಂದು ಉಳವಿಯಿಂದ ನನ್ನ ಗಂಡ ಮತ್ತು ಆರೋಪಿ ಚಾಸಾ.6 ಮತ್ತು 7 ರವರು ಬರುತ್ತಿದ್ದಾಗ ರಾತ್ರಿ 8.45 ಕ್ಕೆ ಅವರು ಬರುತ್ತಿದ್ದ ಕಾರು ಅಪಘಾತವಾಗಿದ್ದರಿಂದ ಮರಣ ಹೊಂದಿರುತ್ತಾರೆ. ಸದಂರಿ ಕಾರ ಕಪ್ಪ ಬಣ್ಣದ ಟಾಟಾ ಕಂಪನಿಯ ಕಾರಟ ಆಗಿದ್ದು ಅದರ ಬಣ್ಣ ನನಗೆ ಗೊತ್ತಿಲ್ಲ. ಸದರಿ ಅಪಘಾತವು ಆರೋಪಿ ಮೈಗಳ್ಳತನ ಮಾಡಿ ಕಾರು ಚಲಾಯಿಸುತ್ತಿದ್ದಾಗ ಆಗಿರುತ್ತದೆ ಸದರಿಯವರು ಗಿಡಕ್ಕೇ ಹೋಗಿ ಡಿಕ್ಕಿ ಪಡಿಸಿದ್ದರಿಂದ ಸ್ಥಳದಲ್ಲೆ ನನ್ನ ಗಂಡ ಮರಣ ಹೊಂದಿರುತ್ತಾರೆ ಈ ವಿಷಯವನ್ನು

ಮರುದಿನ ನನಗೇ ಪೋಲಿಸರು ಹೇಳಿರುತ್ತಾರೆ. ಪೋಲಿಸರು ನನಗೆ ಪೋನ ಮಾಡಿ ನನ್ನ ಗಂಡನಿಗೆ ಅಪಘಾತವಾಗಿದೆ ಬನ್ನಿ ಎಂದು ಹೇಳಿದರು ಗ್ರಾಮೀಣ ಪೋಲಿಸ ಠಾಣೆ ಹೋಗಿ ದಿಃ 30-03-2024 ರಂದು ದೂರನ್ನು ಚಾಸಾ.10 ರವರು ನಾನು ಹೇಳಿದ ಹಾಗೆ ಬರೆದಿರುತ್ತಾರೆ ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ವಕೀಲರಿಂದ**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಸದರಿ ಅಘಾತವು ಬೇರೆಯವರಿಂದ ಗೊತ್ತಾಗಿಹಿದೆ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ಕಾರನ್ನು ಯಾರು ಚಲಾಯಿಸುತ್ತಿದ್ದರು ನನಗೆ ವೈಯಕ್ತಿಕ ಆದರೆ ಅದರಲ್ಲಿದ್ದ ವ್ಯಕ್ತಿ ಒಬ್ಬರು ಹೇಳಿರುತ್ತಾರೆ ಈ ವಿಷಯವನ್ನು ನನಗೆ ಪೋಲಿಸರು ಹೇಳಿರುತ್ತಾರೆ. ಆ ದಿನ ಆರೋಪಿ ಕಾರು ಚಲಾಯಿಸುತ್ತಿರಲಿಲ್ಲ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಠಾಣೆಯಲ್ಲಿ ಬರೆದಿರುತ್ತೇನೆ. ಪೋಲಿಸರು ಹೇಳಿದ ಹಾಗೆ ನನ್ನ ಅಳಿಯ ದೂರನ್ನು ಬರೆದಿದ್ದಾನೆ ಎಂದರೆ ಸರಿಯಲ್ಲ. ನಾನು 10 ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದೂರನ್ನು ನನ್ನ ಅಳಿದಯ ಬರೆದಿದಿದ್ದು ಅವರು ಸಹಿ ಮಾಡು ಎಂದ ಕಾರಣ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.1 ರಲ್ಲಿ ಏನು ಬರೆದಿದ್ದಾರೆ

ಸಿಸಿ ನಂಃ 1779/2024

ಸಿ.ಡಬ್ಲೂ 1

ಪಿ.ಡಬ್ಲೂ 1

ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಪೋಲಿಸರು ಹೇಳಿದ್ದರಿಂದ ಅಪಘಾತ ಆಗಿದೆ ಎನ್ನುವ ವಿಚಾರ ಬರೆಸಿದ್ದೇನೆ ಇಲ್ಲವೋ ನನಗೆ ನೆನಪಿಲ್ಲ. ನನ್ನ ದೂರಿನಲ್ಲಿಃ ನನ್ನ ವಯಸ್ಸು 58 ಎಂದು ನಮೂದು ಆಗಿರುತ್ತದೆ ನನ್ನ ಮುಖ್ಯ ವಿಚಾರಣೇಯುಲ್ಲಿ ನನ್ನ ವಯಸ್ಸು 53 ಎಂದು ಹೇಳಿದ್ದು ಸದರಿ ದೂರನ್ನು ನಾನು ಓದಿದ್ದರೆ ನನ್ನ ವಸಯಸ್ಸು 58 ಅಲ್ಲ 53 ಎಂದು ನನ್ನ ಅಳಿಯನಿಗೆ ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನಿಪಿ.1 ನ್ನು ನಾನು ಓದಿಲ್ಲ ಅದನ್ನು ನನ್ನ ಹೇಳಿಕೆ ಪ್ರಕಾರ ಬರೆದಿಲ್ಲ ಪೋಲಿಸರು ಹೇಳಿದ ಹಾಗೆ ಅದನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ.  ಆರೋಪಿ ಕಾರನ್ನು ಚಲಾಯಿಸುತ್ತಿರಲಿಲ್ಲ ಪೋಲಸರ ಮಾತು ಕೇಳಿ ಅವರೇ ಮದ್ಯಪಾನ ಮಾಡಿ ಗಾಡಿ ಓಡಿಸುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪರಿಹಾರಕ್ಕಾಗಿ ಆರೋಪಿಯಿಂದ ಸುಳ್ಳು ದೂರನ್ನು ದಾಖಲಿಸಿದ್ದೆನೆ ಎಂದರೆ ಸರಿಯಲ್ಲ ಆರೋಪಿಗೂ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**

ಸಿಸಿ ನಂಃ 1779/2024

ಸಿ.ಡಬ್ಲೂ 1

ಪಿ.ಡಬ್ಲೂ 1

4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.